**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 93/2023**

**ಚಾ.ಸಾ.** 3

**ಪ್ರಾ.ಸಾ.** 2

**ದಿನಾಂಕಃ 11.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಮಲ್ಲೇಶಪ್ಪ |
| ತಂದೆಃ ಗಂಡನ ಹೆಸರು | ಚಿಕ್ಕಪ್ಪ ಲಂಗೋಟೆ |
| ಉದ್ಯೋಗ | ವ್ಯವಸಾಯ |
| ವಯಸ್ಸು | 27 |
| ವಾಸಸ್ಥಳ | ಬೇಗೂರ |

**ಪ್ರಾರಂಭ ಸಮಯಃ 12.50 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ನಿಪಿ1 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸುಮಾರು 1 ವರುಷದ ಹಿಂದೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ದಾಳಿ ಮಾಡಿಲ್ಲ ಮತ್ತು ಯಾವುದೇ ಮಾಲನ್ನು ವಶಪಡಿಸಿಕೊಂಡಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ನಿಪಿ1 ಕ್ಕೆ ನಾನು ದಿಃ21.01.2023 ರಂದು ಸಹಿ ಮಾಡಿದ್ದೇನೆ ಅಂದರೆ ನೆನಪಿಲ್ಲ. ನನ್ನನ್ನು ಮತ್ತು ಪ್ರಾಸಾ1 ರವರನ್ನು ಬೇಗೂರ ಬಸ್ ನಿಲ್ದಾಣದ ಬಳಿ ಕರೆಸಿದ್ದರು ಅಂದರೆ ಸರಿಯಲ್ಲ. ನಾವು ಮತ್ತು ಪೊಲೀಸರು ಗಮನಿಸಲಾಗಿ ಸದರಿ ಸಮಯದಲ್ಲಿ ಅಪಾದಿತನು ಹೋಗಿ ಬರುವ ಜನರಿಗೆ ಒಂದು ರೂಪಾಯಿಗೆ 80 ರೂಪಾಯಿ ಹಣ ಕೊಡುತ್ತೇನೆದು ಒಸಿ ಚೀಟಿಗಳನ್ನು ಕೊಡುತ್ತಿದ್ದನು ಅಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಪೊಲೀಸರು ಅಪಾದಿತನ ಮೇಲೆ ದಾಳಿ ಮಾಡಿದರು ಅಂದರೆ ಸರಿಯಲ್ಲ. ದಾಳಿಯಾದ ನಂತರ ಪೊಲೀಸರು ನಿಪಿ1 ರಂತೆ ಪಂಚನಾಮೆ ಜರುಗಿಸಿ ಅಪಾದಿತನ ಬಳಿ ಇದ್ದಂತಹ 550 ಹಣ, ಒಂದು ಬಾಲ್ ಪೆನ್ನು ಮತ್ತು ಒಸಿ ಚೀಟಿಯನ್ನು ವಶಪಡಿಸಿಕೊಂಡರು ಅಂದರೆ ಸರಿಯಲ್ಲ. ನಿಪಿ1 ರಲ್ಲಿರುವ ಅಂಶಗಳನ್ನು ನಮಗೆ ಒದಿ ತಿಳಿಸಿ ನಾವು ಸಹಿ ಮಾಡಿದೆವು ಅಂದರೆ ಸರಿಯಲ್ಲ. ನಿಪಿ1 ನ್ನು ಮಧಾಹ್ನ 02.25 ರಿಂದ 03.25 ರವರೆಗೆ ಜರುಗಿಸಿದರು ಅಂದರೆ ಸರಿಯಲ್ಲ. ನಿಪಿ1 ರಲ್ಲಿರುವ ಎಲ್ಲಾ ಅಂಶಗಳು ಗೊತ್ತಿದ್ದರೂ ಸಹ ಅಪಾದಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತರ ಪರ ಶ್ರೀ ಎಮ್ ಎಸ್ ಡಿ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**